**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಹೊಸಕೋಟೆ**

**ಸಿ.ಸಿ. 55–10**

| | | |
|---|---|---|
| ಹೆಸರು | ಮುನಿಅಂಜಿನಪ್ಪ | ಪ್ರಾ.ಸಾ. |
| ಸಾ.ಪ್ರ.ವ.ಬೋ | | ದಿ:–10.07.2018 |

**ಪಾಟಿ ಸವಾಲು : ಆರೋಪಿ ಪರ ವಕೀಲರಿಂದ: –**

ನಾನು ವ್ಯವಸಾಯ ಮಾಡುತ್ತೇನೆ. ಅಪಘಾತವು ನಾವು ಆಟೋದಲ್ಲಿ ಹೊರಟಾಗ ಆಗಿರುತ್ತದೆ. ಅದರಲ್ಲಿ ಸುಮಾರು 8–9 ಜನ ಇದ್ದೆವು. ಅದು ಪ್ಯಾಸೆಂಜರ್ ಆಟೋ ಆಗಿತ್ತು. ನಂದಗುಡಿಯಿಂದ ಊರಿಗೆ ಹೋಗುವಾಗ ವಡ್ಡಹಳ್ಳಿ ಗೇಟ್ ಹತ್ತಿರ ಅಪಘಾತವಾಗಿರುತ್ತದೆ. ಸದರಿ ರಸ್ತೆ ಚಿಕ್ಕದು ಎಂದರೆ ಸರಿಯಲ್ಲ. ಅಪಘಾತದ ದಿನ ಮಳೆ ಇತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಎದುರುಗಡೆಯಿಂದ ದೊಡ್ಡ ಲಾರಿ ಬರತ್ತಿತ್ತು ಎಂದರೆ ಸರಿಯಲ್ಲ. ಲಾರಿ ಎದುರಿಗೆ ಬಂದಿದ್ದರಿಂದ ಎಡಭಾಗದಲ್ಲಿ ಹಳ್ಳ ಇದ್ದುದ್ದರಿಂದ ವಾಹನ ಬಿದ್ದಿರುತ್ತದೆ ಎಂದರೆ ಸರಿಯಲ್ಲ. ನಮ್ಮನ್ನು ಸರ್ಕಾರಿ ಆಸ್ಪತ್ರೆಗೆ ಅಂಬುಲೆನ್ಸ್ ನಲ್ಲಿ ಕಳುಹಿಸಿ ನಂತರ ಎಂವಿಜೆ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ದೂರನ್ನು ನಮ್ಮ ತಂದೆ ನೀಡಿರುತ್ತಾರೆ. ನಮ್ಮ ತಂದೆ ಸ್ಥಳದಲ್ಲಿ ಇರಲಿಲ್ಲ. ಆರೋಪಿ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ,ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾರಮ್ಮ ಎನ್ನುವವರು ಅವರಿಗೆ ವಾಂತಿ ಬಂದ ಕಾರಣ ತಲೆ ಕೆಳಗೆ ಮಾಡಿದ್ದು, ಆಗ ವಾಹನ ಸಡನ್ನಾಗಿ ನಿಂತ ಕಾರಣ ಅವರ ನಿರ್ಲಕ್ಷತೆಯಿಂದಲೇ ಅವರು ಬಿದ್ದಿರುತ್ತಾರೆ ಎಂದರ ಸರಿಯಲ್ಲ. ನನಗೆ ಯಾವುದೇ ಗಾಯವಾಗಿಲ್ಲ, ನಾನು ಯಾವುದೇ ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಸಿಗಲೆಂದು ಆರೋಪಿಯ ಮತ್ತು ಆರೋಪಿಯ ವಾಹನದ ಮೇಲೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ಆಗಿಲ್ಲ ಎಂದರ ಸರಿಯಲ್ಲ. ಆರೋಪಿ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

ಓ.ಹೇ.ಕೇ.ಸ.ಇದೆ

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ,**
**ಹೊಸಕೋಟೆ.**